**ಓ ಎಸ್ ನಂಃ 10/2015**
**ಪಿ ಡಬ್ಲ್ಯೂ ಃ 2**

**ದಿಃ 10.03.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎನ್ ಎಸ್ ವಕೀಲರಿಂದ :-**

ದಾವ ಸ್ವತ್ತನ್ನು ನಾನು ಹುಟ್ಟಿದಾಗಿನಿಂದ ನೋಡಿರುತ್ತೇನೆ. ತಾವು ಈ ದಾವೆಯಲ್ಲಿ ಸಾಕ್ಷ್ಯ ಪ್ರಮಾಣ ಪತ್ರವನ್ನು ಸಲ್ಲಿಸುವ ಕಾಲಕ್ಕೆ ದಾವಾ ಸ್ವತ್ತು ಬಡಾವಣೆ ರಚನೆ ಆಗಿದೆ ಎಂದರೆ ಸರಿಯಲ್ಲ. ತಾವು ಈ ದಾವೆಯಲ್ಲಿ ಸಾಕ್ಷ್ಯ ಪ್ರಮಾಣ ಪತ್ರವನ್ನು ಸಲ್ಲಿಸುವ ಕಾಲಕ್ಕೆ ವ್ಯವಸಾಯದ ಉದ್ದೇಶಕ್ಕಾಗಿ ಅನ್ಯಕ್ರಾಂತ ಆಗಿದೆ ಎಂದರೆ ಸರಿಯಲ್ಲ. ತಮ್ಮ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಹೇಳಿದ್ದೀರಿ ವಾದಿಗಳಿಗೆ ಕ್ರಯದ ಕರಾರು ಪತ್ರ ಆಗಿತ್ತು ಎಂದರೆ ಸರಿ. ಸದರಿ ಕರಾರು ದಿಃ 15.11.1999 ರಂದು ಹನುಮಯ್ಯನ ಮನೆಯ ಬಳಿ ಬರೆದಿರುತ್ತಾರೆ. ಸದರಿ ಕ್ರಯದ ಕರಾರು ಪತ್ರದಲ್ಲಿ ಸರ್ವೆ ನಂ. 96/8 2 ಎಕರೆ 31 ಗುಂಟೆ, ಸರ್ವೆ ನಂ. 97/5 ರಲ್ಲಿ 2 ಎಕರೆ 6 ಗುಂಟೆ ಜಮೀನು ನಮೂದಾಗಿದೆ. ಕ್ರಯದ ಕರಾರು ಪತ್ರದ ವ್ಯವಹಾರದಲ್ಲಿ ನಾನು ಕೂಡ ಭಾಗಿಯಾಗಿರುತ್ತೇನೆ. ನನಗೆ ಕ್ರಯದ ಕರಾರು ಪತ್ರದ ಪ್ರತಿಫಲ ಗೊತ್ತಿಲ್ಲ. ಆ ದಿನ ಕ್ರಯದ ಕರಾರು ಮುಂಗಡವಾಗಿ ನರಸಿಂಹಯ್ಯ ಮತ್ತು ನರಸಿಂಹಮೂರ್ತಿ ರವರು ಹನಮಯ್ಯನಿಗೆ ಕ್ರಯದ ಕರಾರು ಪ್ರತಿಫಲದ ಮುಂಗಡವಾಗಿ ಸ್ವಲ್ಪ ಹಣವನ್ನು ನಗದು ರೂಪದಲ್ಲಿ ಕೊಟ್ಟಿರುತ್ತಾರೆ. ಸದರಿ ವಿಚಾರಕ್ಕೆ ಪತ್ರ ವ್ಯವಹಾರ ಆಗಿದೆ. ಸದರಿ ವಿಚಾರವನ್ನು ಛಾಪಾ ಕಾಗದದ ಮೇಲೆ ಬರೆಯಲಾಗಿದೆ. ಛಾಪಾ ಕಾಗದವನ್ನು ಹನುಮಯ್ಯನವರು ವಾದಿಗಳ ಕಡೆಯಿಂದ ಖರೀದಿ ಮಾಡಿರುತ್ತಾರೆ. ಛಾಪಾ ಕಾಗದವನ್ನು ಯಾವ ವಾರ ಮತ್ತು ಯಾವ ದಿನಾಂಕದಂದು ಖರೀದಿ ಮಾಡಿರುತ್ತಾರೆ ಎಂದು ಗೊತ್ತಿಲ್ಲ. ಛಾಪಾ ಕಾಗದ ಎಷ್ಟು ರೂಪಾಯಿ ಛಾಪಾ ಕಾಗದ ಎಂದರೆ ನನಗೆ ಗೊತ್ತಿಲ್ಲ. ಛಾಪಾ ಕಾಗದದಲ್ಲಿರುವ ಒಕ್ಕಣೆಯನ್ನು ಹನುಮಯ್ಯನವರ ಮನೆಯಲ್ಲಿಯೇ ಬರೆದಿರುತ್ತಾರೆ. ಛಾಪಾ ಕಾಗದದ ಒಕ್ಕಣೆಯನ್ನು ಬರೆದಾಗ ಹನುಮಯ್ಯ ಮತ್ತು ಪತ್ರ ಬರಹಗಾರರಾದ ಕೆಂಚಮಾರಯ್ಯ ಮತ್ತು ಸಾಕ್ಷಿದಾರರಾದ ವೆಂಕಟೇಶ್, ಜಯಲಕ್ಷ್ಮಮ್ಮ, ರಂಗಪ್ಪ ಮತ್ತು ನರಸಿಂಹಯ್ಯ ರವರಾದ ನಾನು ಹಾಜರಿದ್ದೆವು. ಛಾಪಾ ಕಾಗದದಲ್ಲಿ ಒಕ್ಕಣೆಯನ್ನು ಕೈ ಬರಹದಲ್ಲಿ ಬರೆದಿರುತ್ತಾರೆ. ಪತ್ರ ಬರಹಗಾರರನ್ನು ಹನುಮಯ್ಯನವರೇ ಕರೆದುಕೊಂಡು ಬಂದಿರುತ್ತಾರೆ. ಹನುಮಯ್ಯನವರಿಗೆ ವಯಸ್ಸಾದ ಕಾರಣ ಅವರು ಬೇರೆಯವರ ಸಹಾಯದಿಂದ ಬೇರೆ ಕಡೆಗೆ ಹೋಗುತ್ತಿದ್ದರು. ಹನುಮಯ್ಯವರಿಗೆ ವಯಸ್ಸಾದ ಕಾರಣ ಅವರಿಗೆ ಕೈ ಕಾಲು ನಡುಕ ಬರುತ್ತಿತ್ತು ಎಂದರೆ ಸರಿಯಲ್ಲ. ಪತ್ರಬರಹಗಾರರಾದ ಕೆಂಚಮಾರಯ್ಯನವರು ಯಾವ

ಓ ಎಸ್ ನಂಃ 10/2015

ಪಿ ಡಬ್ಲ್ಯೂ ಃ 2

ಗ್ರಾಮದ ವಾಸಿ ಎಂದರೆ ಸಾಕ್ಷಿಯು ಗೊಲ್ಲರ ಪಾಳ್ಯದ ವಾಸಿ ಎಂದು ನುಡಿಯುತ್ತಾರೆ. ಅಜ್ಜನಹಳ್ಳಿ ಕಾಲೋನಿ ಮತ್ತು ಗೊಲ್ಲರ ಪಾಳ್ಯದ ನಡುವೆ ಸುಮಾರು 15 ಕಿ ಮೀ ಅಂತರವಿದೆ. ಹನುಮಯ್ಯನವರು ಯಾರ ಸಹಾಯದಿಂದ ಪತ್ರ ಬರಹಗಾರರನ್ನು ಕರೆದುಕೊಂಡು ಬಂದಿರುತ್ತಾರೆ ಎಂದರೆ ಸಾಕ್ಷಿಯು ನರಸಿಂಹಯ್ಯವರ ಮೊಬೈಲ್ ಫೋನ್ ನಿಂದ ಕರೆ ಮಾಡಿ ಕರೆಸಿರುತ್ತಾರೆ. ತಮ್ಮ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಹೇಳಿರುವ ದಿನಾಂಕ 10.02.1996 ಮತ್ತು 30.06.1999 ರಂದು ಏನು ವ್ಯವಹಾರ ಆಗಿದೆ ಎಂದರೆ ನಾನು ಹಾಜರಿರಲಿಲ್ಲ ಎಂದು ನುಡಿಯುತ್ತಾರೆ. ಹನುಮಯ್ಯನವರು ಅವಿದ್ಯಾವಂತ ಆಗಿದ್ದ ಕಾರಣ ಹೆಬ್ಬೆಟ್ಟಿನ ಗುರುತನ್ನು ಹಾಕುತ್ತಿದ್ದರು. ದಿಃ 15.11.1999 ರಂದು ಪತ್ರವನ್ನು ಬರೆಯಲು ಯಾರು ಮಾಹಿತಿ ನೀಡಿರುತ್ತಾರೆ ಎಂದರೆ ಸಾಕ್ಷಿಯು ಕೆಂಚಮಾರಯ್ಯನವರು ಮಾಹಿತಿಯನ್ನು ನೀಡಿರುತ್ತಾರೆ. ಪತ್ರ ಬರಹಗಾರರಾದ ಕೆಂಚಮಾರಯ್ಯವರು ಹೇಳಿಕೆಯ ಆಧಾರದ ಮೇರೆಗೆ ದಿಃ 15.11.1999 ರಂದು ಒಂದು ದಾಖಲಾತಿಗೆ ಸಹಿಯನ್ನು ಮಾಡಿರುತ್ತೇನೆ. ದಿ ಃ 15.11.1999 ರಂದು ಬರೆಯಲಾದ ಪತ್ರಕ್ಕೆ ಮೊದಲು ಯಾರು ಸಹಿ ಮಾಡಿರುತ್ತಾರೆ ಎಂದರೆ ಸಾಕ್ಷಿ ವೆಂಕಟೇಶ್ ರವರು ಸಹಿ ಮಾಡಿರುತ್ತಾರೆ, ಆನಂತರ ಜಯಲಕ್ಷ್ಮಮ್ಮ ರವರು ಸಹಿ ಮಾಡಿರುತ್ತಾರೆ, ಆನಂತರ ರಂಗಪ್ಪ ರವರು ಸಹಿ ಮಾಡಿರುತ್ತಾರೆ. ಆನಂತರ ನಾನು ಸಹ ಸದರಿ ಪತ್ರಕ್ಕೆ ಸಹಿ ಮಾಡಿರುತ್ತೇನೆ. ದಿಃ 15.11.1999 ರಂದು ಬರೆಯಲಾದ ಪತ್ರಕ್ಕೆ ನರಸಿಂಹಯ್ಯ ಎಂಬುದಾಗಿ ಸಹಿ ಮಾಡಿರುತ್ತಾರೆ ಎಂದರೆ ಸಾಕ್ಷಿಯು ನಾನು ನರಸಿಂಹಯ್ಯ ಮತ್ತು ಸಿ. ನರಸಿಂಹಯ್ಯ ಎಂಬುದಾಗಿ ಸಹಿ ಮಾಡುತ್ತೇನೆ. ದಿಃ 15.11.1999 ರಂದು ಬರೆಯಲಾದ ಪತ್ರದಲ್ಲಿ ನರಸಿಂಹಯ್ಯ ಎಂಬುದಾಗಿ ಮಾತ್ರ ಬರೆಯಲಾಗಿದೆ ಅವರ ತಂದೆಯ ಹೆಸರು ವಿಳಾಸ ಮತ್ತು ಅವರ ಇನಿಷಿಯಲ್ ನ್ನು ಬರೆದಿಲ್ಲ ಎಂದರೆ ಸರಿಯಲ್ಲ. ತಮ್ಮ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಸಹಿ ಮಾಡಿರುವ ನರಸಿಂಹಯ್ಯ ಮತ್ತು ದಿನಾಂಕ 15.11.1999 ರ ಪತ್ರದಲ್ಲಿ ಸಹಿ ಮಾಡಿರುವ ನರಸಿಂಹಯ್ಯ ಬೇರೆ ಬೇರೆ ಎಂದರೆ ಸರಿಯಲ್ಲ. ನಿಪಿ 68 ರ ದಾಖಲಾತಿಯಲ್ಲಿ ಸಾಕ್ಷಿದಾರರಾಗಿ ಸಹಿ ಮಾಡಿರುವ ಸಹಿ ನನ್ನದಲ್ಲ. ನಿಪಿ 67 ರ ದಾಖಲಾತಿಯಲ್ಲಿ ನಾನು ಸಾಕ್ಷಿದಾರನಾಗಿ ಸಹಿ ಮಾಡಿರುವುದಿಲ್ಲ ಮತ್ತು ಸದರಿ ದಾಖಲಾತಿಗೆ ನಾನು ಪಕ್ಷಗಾರನಲ್ಲ. ರಂಗಪ್ಪನವರು ವಾದಿಗಳ ಸೋದರ ಮಾವ ಎಂದರೆ ಸರಿಯಲ್ಲ. ತಮ್ಮ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಹೇಳಿರುವ ಹಾಗೆ ತಾವು ಯಾವುದೇ ವ್ಯವಹಾರದಲ್ಲಿ ಭಾಗವಹಿಸಿಲ್ಲ ಎಂದರೆ ಸರಿಯಲ್ಲ. ತಮ್ಮ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಹೇಳಿರುವ ಹಾಗೆ ದಿಃ 10.02.1996 ಮತ್ತು ದಿಃ 30.06.1999 ರಂದು ಯಾವುದೇ ವ್ಯವಹಾರ ಆಗಿಲ್ಲ

**ಓ ಎಸ್ ನಂಃ 10/2015**

**ಪಿ ಡಬ್ಲ್ಯೂ ಃ 2**

ಎಂದರೆ ನನಗೆ ಗೊತ್ತಿಲ್ಲ. ತಮ್ಮ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಹೇಳಿರುವ ಹಾಗೆ ಹನುಮಯ್ಯ ಹಾಗೂ ವಾದಿಗಳ ನಡುವೆ ಯಾವುದೇ ವ್ಯವಹಾರ ಆಗಿಲ್ಲ ಎಂದರೆ ಸರಿಯಲ್ಲ. ತಾವು ವಾದಿಗಳಿಗೆ ಸಹಾಯ ಮಾಡುವ ಉದ್ದೇಶದಿಂದ ನ್ಯಾಯಾಲಯಕ್ಕೆ ಬಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**